**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ರಾಣೆಬೆನ್ನೂರು.**

**ಅಪರಾಧಿಕ ಪ್ರಕರಣ ಸಂಖ್ಯೆ : 47/2025**

ಫಿರ್ಯಾದಿಃ ಕರ್ನಾಟಕ ಸರ್ಕಾರ
ರಾಣೆಬೆನ್ನೂರ ಪೋಲೀಸ್ ಠಾಣೆ

- ವಿರುದ್ಧ-

ಆರೋಪಿಃ 1)ಬಾಬಣ್ಣ @ ಶಂಕರಪ್ಪ ಕುರುವತ್ತೆಪ್ಪ ಕೊಪ್ಪದ ಮತ್ತು ಇತರರು

ನಾನು ಶ್ರೀ. ಮಹಾಂತೇಶ ಭೂಸಗೊಳ, 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರಾಣೆಬೆನ್ನೂರು ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ಮಾಡುತ್ತಿದ್ದೇನೆ.

1) ಬಾಬಣ್ಣ @ ಶಂಕರಪ್ಪ ಕುರುವತ್ತೆಪ್ಪ ಕೊಪ್ಪದ,
ವಃ 59 ವರ್ಷ,
ವಾಸಾಃ ರಾಣೆಬೆನ್ನೂರ ಕೊಟ್ರೇಶ್ವರ ನಗರ, ತಾಃ ರಾಣೆಬೆನ್ನೂರ,
ಜಿಃ ಹಾವೇರಿ.

2) ಚೇತನ ಬಾಬಣ್ಣ ಕೊಪ್ಪದ,
ವಃ 35 ವರ್ಷ,
ವಾಸಾಃ ರಾಣೆಬೆನ್ನೂರ ಕೊಟ್ರೇಶ್ವರ ನಗರ, ತಾಃ ರಾಣೆಬೆನ್ನೂರ,
ಜಿಃ ಹಾವೇರಿ.

3) ರವಿ ಬಸಪ್ಪ ಚಲವಾದಿ,
ವಃ 35 ವರ್ಷ,
ವಾಸಾಃ ರಾಣೆಬೆನ್ನೂರ ಅಡವಿ ಆಂಜನೇಯ ಬಡಾವಣೆ, ತಾಃ ರಾಣೆಬೆನ್ನೂರ,
ಜಿಃ ಹಾವೇರಿ.

## ದೋಷಾರೋಪಣೆ

ಫಿರ್ಯಾದಿಯ ಅಳಿಯ ನಾಗರಾಜ ಎಂಬುವವರು ಒಂದು ಅಂಗಡಿ ರಾಣೆಬೆನ್ನೂರ ಶಹರದ ಕೋರ್ಟ ಎದುರಿಗೆ ಇರುವ ಮಂಗಳಾ ಸೀಡ್ಸ ಕಂಪನಿ ಇದ್ದು, ಫಿರ್ಯಾದಿಯು ಸಹ ಅಲ್ಲಿಯೇ ಇರುತ್ತಿದ್ದು, ದಿನಾಂಕ 08-10-2024 ರಂದು ಮುಂಜಾನೆ 11.00 ಗಂಟೆಯ ಸುಮಾರಿಗೆ ಫಿರ್ಯಾದಿಯು ತನ್ನ ಅಳಿಯನ ಅಂಗಡಿ ಮಂಗಳಾ ಸೀಡ್ಸ ಕಂಪನಿಯಲ್ಲಿ ಇದ್ದಾಗ, ಆರೋಪಿತರು ಫಿರ್ಯಾದಿಯ ಅಂಗಡಿಯ ಮುಂದೆ ಬಂದು ಫಿರ್ಯಾದಿಗೆ ನಿಮ್ಮ ಅಳಿಯ ಎಲ್ಲಿ ಇದ್ದಾನೆ, ಅಂತಾ ಕೇಳಿದ್ದಕ್ಕೆ ಫಿರ್ಯಾದಿಯು ಅಳಿಯ ದಾವಣಗೇರಿಗೆ ಹೋಗಿರುವುದಾಗಿ ತಿಳಿಸಿದ್ದು, ಆರೋಪಿತರು ಫಿರ್ಯಾದಿಯ ಅಳಿಯನಿಗೆ ಪೋನ್ ಮಾಡಿ ನೀನು ಕೊಟ್ಟ ಮೆಕ್ಕೆ ಜೋಳದ ಬೀಜ ಪೇಲ್ ಆಗಿದಾವೆ ಅಂತಾ ಅಂದಿದ್ದಕ್ಕೆ, ನಾನು ದಾವಣಗೇರಿಯಲ್ಲಿ ಇದ್ದೇನೆ ಸಾಯಂಕಾಲ ಬರುತ್ತೇನೆ ಅಂತಾ ಹೇಳಿದ್ದಕ್ಕೆ ಆರೋಪಿತರು ಸಮಾನೋದ್ದೇಶದಿಂದ ಸಿಟ್ಟಾಗಿ ಫಿರ್ಯಾದಿಗೆ ನಿನ್ನೌನ, ಸೂಳೇ ಮಗನೇ, ಬೊಸಡಿ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಮನಸ್ಸಿನ ಶಾಂತ ಭಂಗ ಪಡಿಸಿದ್ದರಿಂದ ಭಾರತೀಯ ನ್ಯಾಯಾ ಸಂಹಿತೆ ಕಲಂ 352 ಸಹಕಲಂ 3(5) ರ ರೀತಿಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸಂದರ್ಭ ಮತ್ತು ಮೇಲಿನ ವಿಷಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗಬೇಕೆಂಬ ಸಮಾನೋದ್ದೇಶದಿಂದ ಫಿರ್ಯಾದಿಗೆ ಸ್ವಇಚ್ಛೆಯಿಂದ ಕೈಯಿಂದ ಮೈ ಮೇಲೆ ಎಲ್ಲಿ ಬೇಕಲ್ಲಿ ಹೊಡೆ ಬಡೆ ಮಾಡಿ, ಕಾಲಿನಿಂದ ಒದ್ದು, ಕೈ ಮುಷ್ಠಿ ಮಾಡಿ ಫಿರ್ಯಾದಿಯ ಮೈ ಮೇಲೆ ಗುದ್ದಿ ಸಾದಾ ಸ್ವರೂಪದ ಗಾಯ ಪಡಿಸಿದ್ದರಿಂದ, ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹಕಲಂ 3(5) ರ ರೀತಿಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಪರಾಧ ಎಸಗಬೇಕೆಂಬ ಸಮಾನೋದ್ದೇಶದಿಂದ ಅಂಗಡಿಯ ಕದಾ ಹಾಕಿ ಫಿರ್ಯಾದಿಗೆ ಅವರ ಅಂಗಡಿಯಿಂದಾ ಕರೆದುಕೊಂಡು ರೋಡಿಗೆ ಬಂದು ದಾರಿಯಲ್ಲಿ ಹೊರಟ ಯಾವುದೋ ಒಂದು ವಾಹನದಲ್ಲಿ ಅಪಹರಿಸಿಕೊಂಡು ಕುಂಬಾರ ಓಣಿಯ ಹತ್ತಿರ

ಇರುವ ಗಂಗಾಪುರ ರೇಲ್ವೇ ಗೇಟ ಸಮೀಪ ಇರುವ ಸರಕಾರಿ ಖುಲ್ಲಾ ಜಾಗೆಯಲ್ಲಿ ಕರೆದುಕೊಂಡು ಹೋಗಿ ಅಕ್ರಮ ಪ್ರತಿಬಂಧನ ಉಂಟು ಪಡಿಸಿದ್ದರಿಂದ ಭಾರತೀಯ ನ್ಯಾಯ ಸಂಹಿತೆ ಕಲಂ **140(3)** ಸಹಕಲಂ **3(5)** ರ ರೀತಿಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ನಾಲ್ಕನೇಯದಾಗಿ ಅದೇ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಅಪರಾಧ ಎಸಗಬೇಕೆಂಬ ಸಮಾನೋದ್ದೇಶದಿಂದ ಇವತ್ತು ಇಷ್ಟಕ್ಕೆ ಬಿಟ್ಟಿವಿ ನಮ್ಮ ಬೀಜದ ಬಗ್ಗೆ ಸರಿ ಪಡಿಸಲಿಲ್ಲಾ ಅಂದರೆ ನಿಮ್ಮ ಜೀವ ಸಹಿತ ಬಿಡುವುದಿಲ್ಲಾ ಅಂತಾ ಜೀವದ ಧಮಕಿ ಹಾಕಿ ಅಪರಾಧಿಕ ಭಯೋತ್ಪಾನೆ ಪಡಿಸಿರುವ ಮೂಲಕ, ಭಾರತೀಯ ನ್ಯಾಯಾ ಸಂಹಿತೆ ಕಲಂ 351(2) ಸಹಕಲಂ 3(5) ರ ರೀತಿಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲಿನ ಅಪರಾಧಗಳಿಗಾಗಿ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ಈ ಮೂಲಕ ನಿರ್ದೇಶಿಸುತ್ತಿದ್ದೇನೆ.

**ಸ್ಥಳ : ರಾಣೆಬೆನ್ನೂರು**
**ದಿನಾಂಕ : 09-07-2025**

**2 ನೆ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆ.ಎಂ.ಎಫ್.ಸಿ., ರಾಣೆಬೆನ್ನೂರು.**

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೆಬೆನ್ನೂರು.**

**ಸಿ.ಸಿ.ನಂಃ 47/2025**

ಆರೋಪಿತರ ಹೆಸರು

1) ಬಾಬಣ್ಣ @ ಶಂಕರಪ್ಪ ಕುರುವತ್ತೆಪ್ಪ ಕೊಪ್ಪದ,
ವಃ 59 ವರ್ಷ,
ವಾಸಾಃ ರಾಣೆಬೆನ್ನೂರ ಕೊಟ್ರೇಶ್ವರ ನಗರ, ತಾಃ ರಾಣೆಬೆನ್ನೂರ,
ಜಿಃ ಹಾವೇರಿ.

2) ಚೇತನ ಬಾಬಣ್ಣ ಕೊಪ್ಪದ,
ವಃ 35 ವರ್ಷ,
ವಾಸಾಃ ರಾಣೆಬೆನ್ನೂರ ಕೊಟ್ರೇಶ್ವರ ನಗರ, ತಾಃ ರಾಣೆಬೆನ್ನೂರ,
ಜಿಃ ಹಾವೇರಿ.

3) ರವಿ ಬಸಪ್ಪ ಚಲವಾದಿ,
ವಃ 35 ವರ್ಷ,
ವಾಸಾಃ ರಾಣೆಬೆನ್ನೂರ ಅಡವಿ ಆಂಜನೇಯ ಬಡಾವಣೆ, ತಾಃ ರಾಣೆಬೆನ್ನೂರ,
ಜಿಃ ಹಾವೇರಿ.

ಭಾರಿತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 263 ರಡಿಯಲ್ಲಿ ಆರೋಪಿತರ ಹೇಳಿಕೆ

1) ಈಗ ಓದಿ ಹೇಳಿದ ಆರೋಪಗಳು ನಿಮಗೆ ಅರ್ಥವಾಯಿತೇ?

ಉತ್ತರಃ 1.

2.

3.

2) ತಪ್ಪು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರಃ 1.

2.

3.

**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆ.ಎಂ.ಎಫ್.ಸಿ., ರಾಣೆಬೆನ್ನೂರು.**